ಇ) ಇಲ್ಲದಿದ್ದಲ್ಲಿ ಕಾರಣಗಳೇನು;

ಈ) ಸಮರ್ಪಕವಾಗಿ ಎಲ್ಲಾ ಫಲಾನುಭವಿಗಳಿಗೂ ಸೀಮೆಎಣ್ಣೆ ಸಿಗುತ್ತಿದೆಯೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ

ಇ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗುತ್ತಿರುವ ಸೀಮೆಎಣ್ಣೆ ಪ್ರಮಾಣವು ಅನಿಲ ರಹಿತ ಪಡಿತರ ಚೀಟಿದಾರರಿಗೆ ಸಾಕಾಗುತ್ತಿಲ್ಲವಾದುದರಿಂದ ಅನಿಲ ಸೌಲಭ್ಯ ಹೊಂದಿರುವವರಿಗೆ ಸೀಮೆಎಣ್ಣೆ ಹಂಚಿಕೆ ನೀಡುತ್ತಿರುವುದಿಲ್ಲ.

ಈ) ಎಲ್ಲಾ ಅರ್ಹ ಫಲಾನುಭವಿಗಳಿಗೆ ದೊರೆಯುತ್ತಿದೆ.

624(1223) ಶ್ರೀ ಶಿವಾನಂದ ನಾಯಕ್ (ಭಟ್ಕಳ ಕ್ಷೇತ್ರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ಅಮಾಲ್ಗಮೇಷನ್ ಆದೇಶದಿಂದ ಶೇ. 60ರಷ್ಟು ಬೆರಳಚ್ಚುಗಾರರು, ಶೇ. 50ರಷ್ಟು ಮಾರುಕಟ್ಟೆ ಸಮಿತಿಯ ದ್ವಿತೀಯ ಚರ್ಚೆ ಸಹಾಯಕರು ಬಡ್ತಿ ಪಡೆದ ಕಾರಣ ಇಲಾಖಾ ದ್ವಿತೀಯ ದರ್ಜೆ ಸಹಾಯಕರು ಶೇ. 100ರಷ್ಟು ಬಡ್ತಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅಮಾಲ್ಗಮೇಷನ್ ಅಧಿಸೂಚನೆ ಸಂ: ಎಫ್‌ಡಿ ಎಸ್‌ಆರ್‌ಪಿ 94, ದಿನಾಂಕ 28-3-94ರ ಅನ್ವಯ ಬಡ್ತಿ ವಂಚಿತ ಇಲಾಖಾ ದ್ವಿತೀಯ ದರ್ಜೆ ಸಹಾಯಕರಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ವೃಂದ ಮತ್ತು ನೇಮಕಾತಿ ನಿಯಮ ಅಳವಡಿಸಿಕೊಳ್ಳದೆ ಬಡ್ತಿ ನೀಡಲು ಇಲಾಖೆ ಕ್ರಮ ಕೈಗೊಳ್ಳುತ್ತಿರುವುದು ನಿಜವೇ;

ಇ) ಇದು ನಿಯಮಬಾಹಿರವಲ್ಲವೇ;

ಉ) ಈ ಬಗ್ಗೆ ಸರ್ಕಾರದ ಕ್ರಮಗಳೇನು; ಮಾಹಿತಿ ಒದಗಿಸುವುದು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಸರ್ಕಾರದ ಅಧಿಸೂಚನೆ ಸಂ: ಸಿಎಂಡಬ್ಲ್ಯೂ 171 ಇಎಂಡಿ 95, ದಿನಾಂಕ 4-6-96ರಂತೆ ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಸೇವೆ (ಸಂಯೋಜನೆ) ನಿಯಮಾವಳಿ 1996ನ್ನು ರಚಿಸಲಾಗಿದ್ದು, ದಿನಾಂಕ 27-6-95 ರಿಂದ ಆಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಸೇವೆ (ಸಂಯೋಜನೆ) ನಿಯಮಾವಳಿ 1966ರ ನಿಯಮ 4ರನ್ವಯ ಒಂದುಗೂಡಿಸಿ 2 ಸೇವೆಗಳ ಸಂಯಜಿತ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 14-9-97ರಲ್ಲಿ ಪ್ರಕಟಿಸಲಾಗಿರುತ್ತದೆ. ಈ ರೀತಿ ಪ್ರಕಟಗೊಂಡ ಸೇವಾ ಹಿರಿತನದ ಆಧಾರದ ಮೇಲೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ಕಾರ್ಯಕಾರಿ ಆದೇಶದನ್ವಯ ಶೇ. 1:1ರ ಅನುಪಾತದಲ್ಲಿ ದ್ವಿತೀಯ

ದರ್ಜೆ ಸಹಾಯಕರು / ಬೆರಳಚ್ಚುಗಾರರಿಗೆ ಪ್ರಥಮ ದರ್ಜೆ ಸಹಾಯಕರ ಪದವೃಂದಕ್ಕೆ ಪದೋನ್ನತಿ ನೀಡಲಾಗಿರುತ್ತದೆ. ಮಾರುಕಟ್ಟೆ ಸಮಿತಿಯ ಸೇವೆಗಳು ಹಾಗೂ ಇಲಾಖೆ ಸೇವೆಗಳನ್ನು ಒಟ್ಟುಗೂಡಿಸಿ ಒಂದೇ ಸೇವೆಯನ್ನು ರೂಪಿಸಿರುವುದರಿಂದ ಇಲಾಖಾ ದ್ವಿತೀಯ ದರ್ಜೆ ಸಹಾಯಕರು ಬಡ್ತಿ ವಂಚಿತರಾಗಿರುತ್ತಾರೆಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸಹಕಾರ ಸಂಘಗಳ ಇಲಾಖೆಯಿಂದ ಕೃಷಿ ಮಾರಾಟ ಇಲಾಖೆಯಿಂದ 1973ರಲ್ಲಿ ಪ್ರತ್ಯೇಕಗೊಳಿಸಿ ರಚಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಸಿ 100 ಸಿಎಂಡಿ 74, ದಿನಾಂಕ 30-10-75ರಲ್ಲಿ ಕೃಷಿ ಮಾರಾಟ ಇಲಾಖೆಗೆ ಕಾರ್ಯಕಾರಿ ಆದೇಶವನ್ನು ಹೊರಡಿಸಿದ್ದು, ಪ್ರಸ್ತುತ ಇದರನ್ವಯ ನೇಮಕಾತಿ ಮತ್ತು ಬಡ್ತಿಗಳನ್ನು ಜಾರಿಗೊಳಿಸಲಾಗುತ್ತಿದೆ. ಕೃಷಿ ಮಾರಾಟ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳ ಕರಡನ್ನು ರಚಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮೇಲ್ಕಂಡ ಉತ್ತರಗಳಿಂದಾಗಿ ಪ್ರಶ್ನೆ ಉದ್ಭವಿಸುವುದಿಲ್ಲ.

625(734) ಶ್ರೀ ಶಿವಾರಾಜ ಸಜ್ಜನರ್ (ಹಾವೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯಲ್ಲಿ ಮಹಿಕೋ ಕಂಪನಿಯ ಚಮತ್ಕಾರ ಹತ್ತಿಯನ್ನು ಎಷ್ಟು ಎಕರೆಯಲ್ಲಿ ಬೆಳೆಯುತ್ತಾರೆ;

ಆ) ಚಮತ್ಕಾರ ಹತ್ತಿಯನ್ನು ಬೆಳೆದ ರೈತರು ಸಂಪೂರ್ಣ ಹಾಳಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಮುಂದಿನ ಕ್ರಮವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಪ್ರಾಥಮಿಕ ವರದಿಯ ಪ್ರಕಾರ ಹಾವೇರಿ ಜಿಲ್ಲೆಯಲ್ಲಿ ಮಹಿಕೋ ಕಂಪನಿಯು ವಿತರಿಸಿರುವ ಚಮತ್ಕಾರ ಹತ್ತಿಯನ್ನು ಸುಮಾರು 17649 ಎಕರೆಗಳಲ್ಲಿ ಬೆಳೆಯಲಾಗಿದೆ.

ಆ) ಮಹಿಕೋ ಸಂಸ್ಥೆಯವರು ಹಾವೇರಿ ಜಿಲ್ಲೆಯಲ್ಲಿ ರೈತರಿಗೆ ಮಾರಾಟ ಮಾಡಿದ್ದ ಚಮತ್ಕಾರ ಹತ್ತಿ ತಳಿಯು ಅಂದಾಜು ಶೇ. 85-90 ಭಾಗದಷ್ಟು ಇಳುವರಿಯಲ್ಲಿ ನಷ್ಟವಾಗಿರುವುದು ಗಮನಕ್ಕೆ ಬಂದಿರುತ್ತದೆ.

ಇ) ಮಹಿಕೋ ಸಂಸ್ಥೆಯವರು ಹಾವೇರಿ ಜಿಲ್ಲೆಯಲ್ಲಿ ರೈತರಿಗೆ ಮಾರಾಟ ಮಾಡಿದ್ದ ಚಮತ್ಕಾರ ಹತ್ತಿ ಬೆಳೆಯಲ್ಲಿ ಫಸಲು ಬಾರದೇ ಹಾನಿಯಾಗಿರುವುದು ಕೃಷಿ ಇಲಾಖೆಯ ಗಮನಕ್ಕೆ ಬಂದ ತಕ್ಷಣ ಜಂಟಿ ಕೃಷಿ ನಿರ್ದೇಶಕರು, ಹಾವೇರಿ